ಇದೊಂದು ದುರಂತ. ಬಹಳ ಪ್ರಮುಖವಾದ ವಿಚಾರ ಸದನದಲ್ಲಿ ನಡೆಯುವಾಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇಲ್ಲಿ ಆಯವ್ಯಯ ಚರ್ಚೆ ನಡೆಯುವಾಗ ಎಷ್ಟು ಜನ ಮಂತ್ರಿಗಳಿರಬೇಕು, ಹೇಗಿರಬೇಕು, ಈ ಸದನದ ಪರಿಸ್ಥಿತಿ ಹೇಗಿರಬೇಕು, ಇದು ಯಾವುದನ್ನೂ ನೀವು ಪಾಲಿಸುವುದಿಲ್ಲವೇ ?

SRI QUMARUL ISLAM.—We will wait for another five minutes. Kindly send the message. Otherwise. you can adjourn the Houses for half an hour.

ಉಪಾಧ್ಯಕ್ಷರು.—೮ ಜನ ಮಂತ್ರಿಗಳು ಆ ಸದನದಲ್ಲಿದ್ದಾರೆ. ಉಳಿದವರನ್ನು ನಾನು ಕರೆಯಿಸುತ್ತೇನೆ.

(ಗೊಂದಲ)

ಶ್ರೀ ವಾಟಾಳ್‌ನಾಗರಾಜ್.—ಈ ಸರ್ಕಾರ ಈ ಸದನಕ್ಕೆತೋರಿಸುತ್ತಿರುವ ಆಗೌರವವನ್ನು ವಿರೋಧಿಸಿ ಈ ಸದನದಿಂದ ಸಭಾತ್ಯಾಗ ಮಾಡುತ್ತಿದ್ದೇನೆ. ಇದು ನಾಚಿಕೆಗೇಡು, ಅತ್ಯಂತ ಅಪಮಾನ.

ಶ್ರೀ ಖಮರಲ್ ಇಸ್ಲಾಂ.—ಮಾನ್ಯವಾಟಾಳ್ ನಾಗರಾಜ್‌ರವರ ಜೊತೆ ನಾನೂ ಕೂಡ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್ ಹಾಗೂ ಮಾನ್ಯ ಖಮರಲ್ ಇಸ್ಲಾಮ್‌ರವರು ಸಭೆಯಿಂದ ನಿರ್ಗಮಿಸಿದರು).

ಶ್ರೀ ಕಾಗೋಡು ತಿಮ್ಮಪ್ಪ.—ಬಗರ್ ಹುಕುಂ ಸಾಗುವಳಿದಾರರು ಹಣವನ್ನು ಕಟ್ಟಿದಮೇಲೆ ಅವರಿಗೆ ಸಾಗುವಳಿ ಚೀಟಿಯನ್ನು ಕೊಡುವ ವ್ಯವಸ್ಥೆ ವಸ್ತುಸ್ಥಿತಿಯಿಂದ ಸಾಧ್ಯವಾಗುತ್ತಿಲ್ಲ. ಏಕೆಂದರೆ, ಇವರೆಲ್ಲರೂ ಬಡವರು. ಬಹಳ ಜನರು ಅವಿದ್ಯಾವಂತರು. ಅವರೊಬ್ಬರೇ ಸ್ವತಃ ತಾಲ್ಲೂಕು ಕಛೇರಿಗೆ ಹೋಗಿ, ಅಲ್ಲಿಯ ಗುಮಾಸ್ತನ ಹತ್ತಿರ ಚಲನ್ ಬರೆಸಿಕೊಂಡು ಅದನ್ನು ಬ್ಯಾಂಕ್‌ಗೆ ತೆಗೆದುಕೊಂಡು ಹೋಗಿ ಹಣವನ್ನು ಕಟ್ಟಿ, ಮತ್ತೆ ಆ ಚಲನ್‌ನ್ನು ತಂದು ಆ ಗುಮಾಸ್ತನಿಗೆ ಕೊಟ್ಟರೆ ಅದನ್ನು ಆ ರೆಕಾರ್ಡ್‌ನಲ್ಲಿ ಹಾಕಿಕೊಳ್ಳುತ್ತಾನೆ. ಅನಂತರ ಅವನು ಸಾಗುವಳಿ ಚೀಟಿಯನ್ನು ಬರೆಯುತ್ತಾನೆ. ಆದರೆ ಈ ಕೆಲಸ ಈ ಬಡವರಿಂದ ಮಾಡಲು ಸಾಧ್ಯವಾಗುವುದಿಲ್ಲ. ನಮಗೆ ಇದು ಅನುಭವದಿಂದ ಚೆನ್ನಾಗಿ ಗೊತ್ತಾಗಿದೆ. ಆ ಅವಿದ್ಯಾವಂತರಿಂದ ಹಣವನ್ನು ಕಟ್ಟಿಸಬೇಕಾದರೆ ಅವನ ಜೊತೆ ಇನ್ನೊಬ್ಬ ಹೋಗಬೇಕು, ಕಟ್ಟಿದ ಚಲನ್‌ನ್ನು ಬ್ಯಾಂಕ್‌ಗೆ ಕೊಡಬೇಕು. ಯಾರಾದರೂ ಒಬ್ಬರು ತಿಳುವಳಿಕೆ ಇರುವವರು ಅವನ ಜೊತೆ ಇದ್ದರೆ ಮಾತ್ರ ಸಕಾಲದಲ್ಲಿ ಹಣವನ್ನು ಬ್ಯಾಂಕ್‌ಗೆ ಕಟ್ಟಿ ಸಾಗುವಳಿ ಚೀಟಿಯನ್ನು ತೆಗೆದುಕೊಳ್ಳುತ್ತಾನೆ. ಆದರೆ ಅವನ ಜೊತೆಗೆ ಹೋದವನು ಸರಿಯಾಗಿದ್ದರೆ ಪರವಾಗಿಲ್ಲ, ಇಲ್ಲದಿದ್ದರೆ ಆ ಹಣವನ್ನು ಇವನೇ ಜೇಬಿಗೆ ಇಳಿಸುತ್ತಾನೆ. ತಮಗೆ ಹೇಳುವುದಾದರೆ ೭೮-೭೯ನೇ ಸಾಲಿನಲ್ಲಿ ಬ್ಯಾಂಕ್‌ಗೆ ಹಣವನ್ನು ಕಟ್ಟಿದ್ದರೂ ಇದುವರೆಗೂ ಕೆಲವರು ಸಾಗುವಳಿ ಚೀಟಿಯನ್ನು ತೆಗೆದುಕೊಂಡಿಲ್ಲ. ಕಾರಣ ಬ್ಯಾಂಕ್‌ಗೆ ಹಣವನ್ನು ಕಟ್ಟಿದ ಮೇಲೆ ಆ ಚಲನ್‌ನ್ನು ತಾಲ್ಲೂಕು ಕಛೇರಿಗೆ ತಂದುಕೊಡಬೇಕು, ಆದರೆ ಕೊಟ್ಟಿಲ್ಲ. ಇವರ ಲೆಕ್ಕದಲ್ಲಿ ಅವನು ಹಣವನ್ನು ಕಟ್ಟಿಲ್ಲ. ಏಕೆಂದರೆ ಚಲನ್ ಬಂದಿಲ್ಲ. ಅವನ ಲೆಕ್ಕದಲ್ಲಿ ಹಣ ಕಟ್ಟಿದ್ದಾನೆ. ಏಕೆಂದರೆ ಚಲನ್ ಅವನ ಹತ್ತಿರವೇ ಇದೆ. ಇದು ಪ್ರೊಸೀಜರ್. ಇವತ್ತು ಅವಿದ್ಯಾವಂತರಿಗೆ ಹಳ್ಳಿಯಲ್ಲಿ ಇರತಕ್ಕ ಈ ಜನರಿಗೆ ಸ್ವತಃ ತಾಲ್ಲೂಕು ಕಛೇರಿಗೆ ಹೋಗಿ ತಮ್ಮ ಕೆಲಸವನ್ನು ತಾವೇ ನಿಂತು ಮಾಡಿಸಿಕೊಳ್ಳುವ ಶಕ್ತಿ ಅವರಲ್ಲಿಲ್ಲ. ಇದು ನಮ್ಮ ಕ್ಷೇತ್ರದಲ್ಲಿ ಹಾಗೂ ಪ್ರತಿಯೊಂದು ಕಡೆ ಇರತಕ್ಕ ತೊಂದರೆ. ನೀವು ಯಾರನ್ನೇ ಕೇಳಿದರೂ ಅವರೆಲ್ಲರೂ ಇದನ್ನೇ ಹೇಳುತ್ತಾರೆ. ಆದ್ದರಿಂದ ನಾವು ಮಂಜೂರಾತಿಯನ್ನು ಮಾಡಿದ ಕೂಡಲೇ ಅವರಿಗೆ ಸಾಗುವಳಿ ಚೀಟಿಯನ್ನು ಕೊಟ್ಟು, ಅವನು ಕಟ್ಟುವಂಥ ಹಣವನ್ನು ಎಷ್ಟು ಕಂತುಗಳಲ್ಲಿ ಕಟ್ಟಬೇಕೆಂದಿದೆ ಅದನ್ನು ಲ್ಯಾಂಡ್ ರೆವಿನ್ಯೂ ಮಂತ್ರಾಂತರ ಆರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಎಂದು ಭೂಸುಧಾರಣಾ ಕಾನೂನಿನಲ್ಲಿ ನಾವೇನು ಮಾಡಿದ್ದೇವೆ, ಅದೇರೀತಿ ಮಾಡಿದರೆ ಇನ್ನು ೩-೪ ತಿಂಗಳಲ್ಲಿ ಎಲ್ಲ ಪ್ರಕರಣಗಳನ್ನೂ ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಧರ್ಮಸಿಂಗ್‌ರವರು ಕಂದಾಯ ಸಚಿವರು